ಖಿ) ಜೂಟು ರೇಷ್ಮೆ ಗಿರಣಿ
ಚನ್ನಪಟ್ಟಣ. (+)೧,೨೮,೯೮,೯೪೧ (+)೯೯,೫೭,೨೫೭ (+)೧೦,೯೪,೦೯೪

೫) ಜಾಗತಿಕ ಬ್ಯಾಂಕ್‌ನಿಂದ ಮಂಜೂರಾದ ರೂ. ೧೬೧೫.೮೩ ಲಕ್ಷಗಳನ್ನು ಸಾಲವಾಗಿ ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್‌ನ ಮುಖಾಂತರ ಪಡೆಯಲಾಗಿದೆ.

ಬೆಂಗಳೂರು – ಹೊಸದುರ್ಗ ನಡುವೆ ಸರ್ಕಾರಿ ವಾಹನಗಳನ್ನು ಓಡಿಸುವ ಬಗ್ಗೆ

೭೪೭. ಶ್ರೀ ಜಿ ರಾಮದಾಸ್ (ಹೊಸದುರ್ಗ) ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ

ಅ) ಹೊಸ ರಸ್ತೆ ಮಾರ್ಗಗಳಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ವಾಹನಗಳನ್ನು ಓಡಿಸಲು ಸರ್ಕಾರದವರು ಉದ್ದೇಶಿಸಿದ್ದಾರೆಯೇ.

ಆ) ಹಾಗಿದ್ದಲ್ಲಿ ಹೊಸದುರ್ಗ–ಬೆಂಗಳೂರು ನಡುವೆ ಹೆಚ್ಚುವರಿ ಸರ್ಕಾರಿ ವಾಹನಗಳನ್ನು ಓಡಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಹಾಗೂ ವಸತಿ ಮಂತ್ರಿಗಳು).—

ಅ) ಹೌದು

ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಪ್ರಯಾಣಿಕರ ಆಗತ್ಯಕ್ಕನುಗುಣವಾಗಿ ಬೆಂಗಳೂರಿನಿಂದ ಹೊಸದುರ್ಗಕ್ಕೆ ಬಸ್ಸುಗಳನ್ನು ಓಡಿಸುತ್ತಿದೆ. ಪ್ರಯಾಣಿಕರ ಒತ್ತಡ ಹೆಚ್ಚಾದಲ್ಲಿ ಬಸ್ಸುಗಳನ್ನು ಹೆಚ್ಚಿಸಲಾಗುವುದು.

ಟೆಂಪೋವಾಹನಗಳಿಗೆ ಆಸನ ಪರ್ಮಿಟ್ ಹೆಚ್ಚಿಸುವ ಬಗ್ಗೆ

೧೩೨೬. ಶ್ರೀ ಸಿ.ಎಂ. ಉದಾಸಿ(ಹಾನಗಲ್) ಮಾನ್ಯ ಸರಿಗೆ ಮತ್ತು ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೆಟಡಾರು ವಾಹನಗಳಿಗೆ ಏಳು ಆಸನದ ಬದಲಾಗಿ ಹದಿಮೂರು ಆಸನದ ಪರವಾನಿಗೆ ನೀಡುವ ನಿರ್ಧಾರ ಸರ್ಕಾರದವರು ಜಾರಿಗೆ ತರದಿರಲು ಕಾರಣವೇನು ?

ಆ) ಮಿನಿ ಬಸ್‌ಗಳನ್ನು ನಗರ ಪ್ರದೇಶದಿಂದ ಬೇರೆ ಊರುಗಳಿಗೆ ಓಡಿಸುವ ಸಲಹೆ ಸರ್ಕಾರದವರಲ್ಲಿದೆಯೆ?

ಶ್ರೀ. ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಹಾಗೂ ವಸತಿ ರಾಜ್ಯ ಮಂತ್ರಿಗಳು).—

ಅ) ಮೆಟಡಾರು ವಾಹನಗಳಲ್ಲಿ ೧೨+೧ ಜನರನ್ನು ಕೊಂಡೊಯ್ಯಲು ಪರವಾನಗಿಯನ್ನು ನೀಡಲು ೧೯೫೯ರ ಮೋಟಾರು ವಾಹನ ಕಾಯ್ದೆಗೆ ತಿದ್ದುಪಡಿ ಮಾಡಬೇಕು, ಸದರಿ ಕಾಯ್ದೆಯನ್ನು ತಿದ್ದುಪಡಿ ಮಾಡಲು ಕೇಂದ್ರ ಸರ್ಕಾರದ ಅನುಮತಿ ಅವಶ್ಯಕ, ಈಗ ಅನುಮತಿಯಿಂ ಸಿಕ್ಕಿರುವುದರಿಂದ ಮುಸೂದೆಯನ್ನು ಪ್ರಸ್ತುತ ಅಧಿವೇಶನದಲ್ಲಿ ಮಂಡಿಸಲಾಗುವುದು.

ಆ) ಇಲ್ಲ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಬೆಂಗಳೂರಿಂದ ನಗರದಿಂದ ಎಲ್ಲ ತಾಲ್ಲೂಕುಗಳಿಗೂ ನೇರ ಬಸ್ ಸೌಲಭ್ಯ ಕಲ್ಪಿಸುವ ಬಗ್ಗೆ

೧೫೧೬. ಶ್ರೀ ಎ.ಶಿವಣ (ಹೆಗ್ಗಡೆ ದೇವನಕೋಟೆ)ಮಾನ್ಯ ಸಾರಿಗೆ ಹಾಗೂ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬೆಂಗಳೂರು ನಗರದಿಂದ ಎಲ್ಲಾ ತಾಲ್ಲೂಕು ಕೇಂದ್ರಗಳಿಗೂ ನೇರ ವಾಹನ ಸೌಲಭ್ಯ ಒದಗಿಸಲು ಉದ್ದೇಶಿಸಿರುವುದು ನಿಜವೇ,

ಆ) ಹಾಗಿದ್ದಲ್ಲಿ ಯಾವಾಗ ಒದಗಿಸಲಾಗುವುದು,